# ಕರ್ನಾಟಕ ರಾಜ್ಯ ವಕ್ಫ್ ಮಂಡಳಿ

No. KBA/Grants/GEN/05/2016-17

Date: 15-09-2017

## ಸುತ್ತೋಲೆ

**ವಿಷಯ:** ವಕ್ಫ್ ಸಂಸ್ಥೆಗಳ ಆಸ್ತಿ ಸಂರಕ್ಷಣೆ ಹಾಗೂ ದುರಸ್ಥಿ ಮತ್ತು ಜೀರ್ಣೋದ್ಧಾರ ಯೋಜನೆಗಳಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳಲ್ಲಿ ಬಳಕೆ ಪ್ರಮಾಣ ಪತ್ರದಲ್ಲಿ ಮೇಲು ರುಜು ಮಾಡುವ ಬಗ್ಗೆ.

ಉಲ್ಲೇಖ:ಈ ಕಛೇರಿ ಸುತ್ತೋಲೆ ಸಂಖ್ಯೆ No. KBA/Grants/GEN/05/2016-17, Date: 14-08-2017.

* * * * *

ದಿನಾಂಕ: 14.08.2017ರಂದು ವಕ್ಫ್ ಆಸ್ತಿಗಳಲ್ಲಿ ದುರಸ್ತಿ ಮತ್ತು ಜೀರ್ಣೋದ್ಧಾರ ಹಾಗೂ ವಕ್ಫ್ ಆಸ್ತಿಗಳ ಸಂರಕ್ಷಣೆ ಇತ್ಯಾದಿ ಕಾರ್ಯಗಳು ಸಮರ್ಪಕವಾಗಿ ನಡೆದಿವೆ ಎಂಬುದನ್ನು ಖಾತ್ರಿ ಪಡೆದುಕೊಳ್ಳಲು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರು (AEE) ಅಥವಾ ನಿರ್ಮಿತಿ ಕೇಂದ್ರದ ಅಭಿಯಂತರರುಗಳಿಂದ ಪರಿಶೀಲನೆಯ ನಂತರ ಬಳಕೆ ಪ್ರಮಾಣ ಪತ್ರಗಳಲ್ಲಿ ಮೇಲು ರುಜು ಪಡೆಯಲು ಉಲ್ಲೇಖಿತ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿರುವುದು ಸರಿಯಷ್ಟೆ, ಆದರೆ ಇದರ ಬಗ್ಗೆ ತಗಲುವ ವೆಚ್ಚದ ಬಗ್ಗೆ ಕೆಲವು ಜಿಲ್ಲಾ ವಕ್ಫ್ ಅಧಿಕಾರಿಗಳು ಸ್ಪಷ್ಟೀಕರಣ ಕೇಳಿದ್ದು, ಇದರ ಬಗ್ಗೆ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದೆ.

ಲೋಕೋಪಯೋಗಿ ಇಲಾಖೆಯ ಕೈಪಿಡಿ (Manual) ನಲ್ಲಿರುವ ಕಂಡಿಕೆ 329ರಲ್ಲಿ Centage charges ಗಳನ್ನು ಪಾವತಿಸುವ ಬಗ್ಗೆ ಸವಿವರವಾಗಿ ವಿವರಿಸಲಾಗಿದೆ. ವಕ್ಫ್ ಸಂಸ್ಥೆಗಳು ಪರೋಪಕಾರಿ ಹಾಗೂ ಧಾರ್ಮಿಕ ಸಂಸ್ಥೆಗಳಾಗಿರುವುದರಿಂದ, ಇಂತಹ ಸಂಸ್ಥೆಗಳಿಗೆ ಸಂಬಂಧಪಟ್ಟ ಶುಲ್ಕದಿಂದ ವಿನಾಯಿತಿ ನೀಡಲಾಗಿದ್ದು ಸಂಬಂಧಪಟ್ಟ ಅಭಿಯಂತರರುಗಳಿಗೆ (Engineer) ಇದನ್ನು ಮನವರಿಕೆ ಮಾಡಿ ಬಳಕೆ ಪ್ರಮಾಣ ಪತ್ರಗಳಲ್ಲಿ ಅವರ ಮೇಲು ರುಜು ಪಡೆದು ಸಲ್ಲಿಸಲು ಸೂಚಿಸಿದೆ.

ಲೋಕೋಪಾಯೋಗಿ ಇಲಾಖೆಯ ಕೈಪಿಡಿಯ (Manual) ಉದೃತ ಭಾಗವನ್ನು ಲಗತ್ತಿಸಿದೆ.

(ಮೊಹಮ್ಮದ್ ಮೋಹಸೀನ್ ಐ.ಎ.ಎಸ್)
ಆಡಳಿತಾಧಿಕಾರಿ
ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು.

ರವರಿಗೆ,
ರಾಜ್ಯದ ಎಲ್ಲಾ ಜಿಲ್ಲಾ ವಕ್ಫ್ ಅಧಿಕಾರಿಗಳಿಗೆ.

**ಪ್ರತಿಯನ್ನು:-** ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸುತ್ತಾ ಈ ಕುರಿತು ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರದ ಎಲ್ಲಾ ಸಹಾಯಕ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಇದರ ಬಗ್ಗೆ ಸಹಕರಿಸಲು ಸೂಚನೆ ನೀಡಿ ಸಹಕರಿಸಲು ಕೋರಿದೆ.

6, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560 052. Website : www.karwakf.org
ದೂರವಾಣಿ : 080-22264594 / 22264595 ಫ್ಯಾಕ್ಸ್ : 080-22255663 ಇ-ಮೇಲ್ : info@karwakf.org